# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

**'ನಿರ್ಮಾಣ ಭವನ', ಡಾ.ರಾಜ್‌ಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10.**

**ದೂರವಾಣಿ:080-23378375-80, ಇ-ಮೈಲ್:souharda@souharda.coop**


ಸಂಖ್ಯೆ : ಕರಾಸೌಸಂಸನಿ/ಸುತ್ತೋಲೆ/ಆ-6/2015-16 ದಿನಾಂಕ: 06 ಜನವರಿ 2016

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ,

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರ ಚುನಾವಣೆಯು ಈ ವರ್ಷಾಂತ್ಯದಲ್ಲಿ ನಡೆಯಬೇಕಿದೆ. ಚುನಾವಣೆಯಲ್ಲಿ ರಾಜ್ಯದ ಎಲ್ಲಾ ಅರ್ಹ ಸೌಹಾರ್ದ ಸಹಕಾರಿಗಳ ಡೆಲಿಗೇಟ್(ಪ್ರತಿನಿಧಿ)*ಗಳು ಭಾಗವಹಿಸುತ್ತಾರೆ. ತಮ್ಮ ಸಹಕಾರಿಯನ್ನು ಸಂಯುಕ್ತ ಸಹಕಾರಿಯ ಸಾಮಾನ್ಯ ನಿಕಾಯದಲ್ಲಿ ಈ ಹಿಂದೆ ಪ್ರತಿನಿಧಿಸುತ್ತಿದ್ದ ಪ್ರತಿನಿಧಿಗಳೇ ಈ ಸಲವೂ ಪ್ರತಿನಿಧಿಸಬೇಕು. 2015ರಲ್ಲಿ ಬೆಂಗಳೂರಿನಲ್ಲಿ ನಡೆದ 14ನೇ ಸಾಮಾನ್ಯ ಸಭೆಯ ನಂತರ ತಮ್ಮ ಸಹಕಾರಿಯ ಅಧ್ಯಕ್ಷರು ಬದಲಾಗಿದ್ದಲ್ಲಿ, ನೂತನ ಅಧ್ಯಕ್ಷರು ಸಂಯುಕ್ತ ಸಹಕಾರಿಯ ಸಾಮಾನ್ಯ ನಿಕಾಯದ ಡೆಲಿಗೇಟ್ ಆಗಬಹುದು ಅಥವಾ ಇನ್ನೊಬ್ಬರನ್ನು ಹೊಸದಾಗಿ ನಾಮ ನಿರ್ದೇಶಿಸಬಹುದು.

ಇದುವರೆಗೂ ತಮ್ಮ ಸಹಕಾರಿಯಿಂದ ಸಂಯುಕ್ತ ಸಹಕಾರಿಯ ಸಾಮಾನ್ಯ ನಿಕಾಯಕ್ಕೆ ಡೆಲಿಗೇಟ್‌ನನ್ನು ಕಳುಹಿಸಿರದಿದ್ದಲ್ಲಿ ಅಂತಹ ಸಹಕಾರಿಗಳು ಮೇಲೆ ತಿಳಿಸಿದಂತೆ ತಮ್ಮ ಸಹಕಾರಿಯ ಡೆಲಿಗೇಟ್‌ನನ್ನು ಕಳುಹಿಸತಕ್ಕದ್ದು.

ಕಾಯ್ದೆ ಕಲಂ 53(9)ರಂತೆ ಸದಸ್ಯ ಸಹಕಾರಿಯ ಅಧ್ಯಕ್ಷರು ಸಂಯುಕ್ತ ಸಹಕಾರಿಯ ಸಾಮಾನ್ಯ ನಿಕಾಯದ ಡೆಲಿಗೇಟ್ ಆಗಿರುತ್ತಾರೆ. ಯಾವುದೇ ಕಾರಣಕ್ಕಾಗಿ ಅವರು ಪ್ರತಿನಿಧಿಸಲು ಅಸಮರ್ಥರಾದರೆ ಮಂಡಲಿಯ ಯಾವುದೇ ನಿರ್ದೇಶಕನನ್ನು ಡೆಲಿಗೇಟ್ ಆಗಿ ನಾಮ ನಿರ್ದೇಶಿಸಬಹುದು. ಆ ಡೆಲಿಗೇಟನು ಸಹಕಾರಿಯ ಪದದಲ್ಲಿರುವವರೆಗೂ ಅವರೇ ಡೆಲಿಗೇಟ್ ಆಗಿ ಪ್ರತಿನಿಧಿಸುವುದು ಮುಂದುವರೆಯತಕ್ಕದ್ದು.

ಚುನಾವಣೆಯಲ್ಲಿ ಭಾಗವಹಿಸಲು ಸಂಯುಕ್ತ ಸಹಕಾರಿಯು ವಿತರಿಸಿದ ಗುರುತಿನ ಚೀಟಿ ಕಡ್ಡಾಯವಾಗಿರುತ್ತದೆ. ಈಗಾಗಲೇ ಅನೇಕ ಸಹಕಾರಿಗಳಿಗೆ ಗುರುತಿನ ಚೀಟಿ ನೀಡಿದ್ದು, ಕೆಲವು ಹಳೆಯ ಗುರುತಿನ ಚೀಟಿಗಳಲ್ಲಿನ ಭಾವಚಿತ್ರದ ಆಧಾರದಲ್ಲಿ ಡೆಲಿಗೇಟ್‌ಗಳನ್ನು ಗುರುತಿಸುವುದು ಕಷ್ಟ ಸಾಧ್ಯ. ಸಂಯುಕ್ತ ಸಹಕಾರಿಯ ಆರಂಭದ ದಿನಗಳಲ್ಲಿ ನೀಡಿದ ಗುರುತಿನ ಚೀಟಿಯ ಮಾದರಿಗೂ ಈಗ ನೀಡುತ್ತಿರುವ ಮಾದರಿಗೂ ವ್ಯತ್ಯಾಸವಿದೆ. ಇದೆಲ್ಲಕ್ಕೂ ಏಕರೂಪತೆ ತರುವ ಅವಶ್ಯಕತೆ ಇದೆ. ಈ ಹಿನ್ನೆಲೆಯಲ್ಲಿ **ಚುನಾವಣೆಯ ಸಂದರ್ಭದಲ್ಲಿ ಗೊಂದಲಕ್ಕೆ ಕಾರಣವಾಗಬಾರದೆಂಬ ಕಾರಣದಿಂದ ಎಲ್ಲಾ ಡೆಲಿಗೇಟ್‌ಗಳಿಗೂ ನೂತನ ಮಾದರಿಯ ಗುರುತಿನ ಚೀಟಿಗಳನ್ನು ನೀಡಲಾಗುತ್ತಿದೆ.**

ಈಗಾಗಲೇ ಗುರುತಿನ ಚೀಟಿ ಪಡೆದಿರುವ ಡೆಲಿಗೇಟ್‌ಗಳೂ ಸೇರಿದಂತೆ ಎಲ್ಲಾ ಡೆಲಿಗೇಟ್‌ಗಳೂ ಸಹ ದಿನಾಂಕ 25 ಜನವರಿ 2016ರೊಳಗೆ ಇತ್ತೀಚಿನ ಎರಡು ಭಾವಚಿತ್ರಗಳೊಂದಿಗೆ ಲಗತ್ತಿಸಿದ ನಿಗದಿತ ನಮೂನೆಯಲ್ಲಿ ಸಂಯುಕ್ತ ಸಹಕಾರಿಗೆ ಕೋರಿಕೆ ಸಲ್ಲಿಸಿ ಗುರುತಿನ ಚೀಟಿ ಪಡೆಯಲು ಸೂಚಿಸಿದೆ.

ವಂದನೆಗಳೊಂದಿಗೆ,

ಸಹಿ/-

(ಶರಣಗೌಡ ಜಿ. ಪಾಟೀಲ)

ವ್ಯವಸ್ಥಾಪಕ ನಿರ್ದೇಶಕ

* ಕಾಯ್ದೆ ತಿದ್ದುಪಡಿಯಲ್ಲಿ ಪ್ರತಿನಿಧಿ ಎಂಬ ಪದಕ್ಕೆ ಡೆಲಿಗೇಟ್ ಎಂಬ ಪದವನ್ನು ಉಪಯೋಗಿಸಿರುವುದರಿಂದ ಡೆಲಿಗೇಟ್ ಎಂಬ ಪದವನ್ನು ಉಪಯೋಗಿಸಿದೆ.

---

**ದಯವಿಟ್ಟು ಗಮನಿಸಿ:**

1. ಸಹಕಾರಿಯ ಅಧ್ಯಕ್ಷರೇ ಸಹಕಾರಿಯ ಡೆಲಿಗೇಟ್ ಆದಲ್ಲಿ ಅವರನ್ನು ಇನ್ನೊಬ್ಬ ನಿರ್ದೇಶಕ ಅಥವಾ ಸಹಕಾರಿಯ ಮುಖ್ಯಕಾರ್ಯನಿರ್ವಾಹಕನನು ದೃಢೀಕರಿಸತಕ್ಕದ್ದು. ಅಧ್ಯಕ್ಷರು ಮಂಡಲಿಯ ಯಾವುದೇ ನಿರ್ದೇಶಕನನ್ನು ನಾಮ ನಿರ್ದೇಶನ ಮಾಡಿದಲ್ಲಿ ಅವರನ್ನು ಅಧ್ಯಕ್ಷರೇ ದೃಢೀಕರಿಸತಕ್ಕದ್ದು. **ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕ/ಕಾರ್ಯದರ್ಶಿ/ಕಛೇರಿಯ ಮುಖ್ಯಸ್ಥ ಅಥವಾ ಯಾವುದೇ ಉದ್ಯೋಗಿಯು ಸಹಕಾರಿಯ ಡೆಲಿಗೇಟ್ ಆಗಲು ಬರುವುದಿಲ್ಲ.**
2. ಒಂದು ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರವನ್ನು ಮೇಲ್ಕಾಣಿಸಿದ ಸ್ಥಳದಲ್ಲಿ ಅಂಟಿಸಿ, ಅದರ ಮೇಲೆ ಸಹಕಾರಿಯ ಮೊಹರು ಹಾಕಬೇಕು. ಇನ್ನೊಂದು ಸ್ಟಾಂಪ್ ಅಳತೆಯ ಇತ್ತೀಚಿನ ಭಾವಚಿತ್ರವನ್ನು ಪ್ರತ್ಯೇಕವಾಗಿ ಕಳುಹಿಸಿ. **(ಒಟ್ಟು ಎರಡು ಇತ್ತೀಚಿನ ಭಾವಚಿತ್ರಗಳು)**

## **ಸಂಯುಕ್ತ ಸಹಕಾರಿಯ ಸಾಮಾನ್ಯ ಸಭೆಗೆ ಸಹಕಾರಿಯನ್ನು ಪ್ರತಿನಿಧಿಸುವವರ ವಿವರಗಳು**

ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರ ಇಲ್ಲಿ ಅಂಟಿಸಿ, ಸ್ಟಾಂಪ್ ಅಳತೆಯ ಇನ್ನೊಂದು ಭಾವಚಿತ್ರವನ್ನು ಲಗತ್ತಿಸಿ.

1. ಸಹಕಾರಿಯ ಹೆಸರು :..........................................................................

   ..........................................................................

   ..........................................................................
2. ಸಂಯುಕ್ತ ಸಹಕಾರಿಯಲ್ಲಿನ ಸದಸ್ಯತ್ವ ಸಂಖ್ಯೆ :..........................................................................
3. ಸಹಕಾರಿಯ ಪ್ರತಿನಿಧಿಯ ಹೆಸರು :..........................................................................
4. ಸಹಕಾರಿಯಲ್ಲಿನ ಹುದ್ದೆ :..........................................................................
5. ಪ್ರಸಕ್ತ ಹುದ್ದೆಗೆ ಆಯ್ಕೆಯಾದ ದಿನಾಂಕ :..........................................................................
6. ಪ್ರತಿನಿಧಿಯ ಸಹಿ :..........................................................................
7. ಪ್ರತಿನಿಧಿಯನ್ನು ದೃಢೀಕರಿಸಿದವರು :..........................................................................
8. ಧೃಢೀಕರಿಸಿದವರ ಹುದ್ದೆ :..........................................................................
9. ಧೃಢೀಕರಿಸಿದವರ ಸಹಿ :..........................................................................

**ಸಹಕಾರಿಯ ಮೊಹರು** **<u>ಮುಖ್ಯ ಕಾರ್ಯನಿರ್ವಾಹಕನ/ಳ</u> ಸಹಿ**

**ದಯವಿಟ್ಟು ಗಮನಿಸಿ:**

1. ಸಹಕಾರಿಯ ಅಧ್ಯಕ್ಷರೇ ಸಹಕಾರಿಯ ಡೆಲಿಗೇಟ್ ಆದಲ್ಲಿ ಅವರನ್ನು ಇನ್ನೊಬ್ಬ ನಿರ್ದೇಶಕ ಅಥವಾ ಸಹಕಾರಿಯ ಮುಖ್ಯಕಾರ್ಯನಿರ್ವಾಹಕನನು ದೃಢೀಕರಿಸತಕ್ಕದ್ದು. ಅಧ್ಯಕ್ಷರು ಮಂಡಲಿಯ ಯಾವುದೇ ನಿರ್ದೇಶಕನನ್ನು ನಾಮ ನಿರ್ದೇಶನ ಮಾಡಿದಲ್ಲಿ ಅವರನ್ನು ಅಧ್ಯಕ್ಷರೇ ದೃಢೀಕರಿಸತಕ್ಕದ್ದು. **<u>ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕ/ಕಾರ್ಯದರ್ಶಿ/ಕಛೇರಿಯ ಮುಖ್ಯಸ್ಥ ಅಥವಾ ಯಾವುದೇ ಉದ್ಯೋಗಿಯು ಸಹಕಾರಿಯ ಡೆಲಿಗೇಟ್ ಆಗಲು ಬರುವುದಿಲ್ಲ.</u>**
2. ಒಂದು ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರವನ್ನು ಮೇಲ್ಕಾಣಿಸಿದ ಸ್ಥಳದಲ್ಲಿ ಅಂಟಿಸಿ, ಅದರ ಮೇಲೆ ಸಹಕಾರಿಯ ಮೊಹರು ಹಾಕಬೇಕು. ಇನ್ನೊಂದು ಸ್ಟಾಂಪ್ ಅಳತೆಯ ಇತ್ತೀಚಿನ ಭಾವಚಿತ್ರವನ್ನು ಪ್ರತ್ಯೇಕವಾಗಿ ಕಳುಹಿಸಿ. **(ಒಟ್ಟು ಎರಡು** ಇತ್ತೀಚಿನ **ಭಾವಚಿತ್ರಗಳು)**